**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಡಿಸಿಇ:ಟಿಆರ್‌ಎನ್:ಟಿಆರ್‌ಎನ್:24:2023:ವ&ನಿ ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:27.07.2023

# ಸುತ್ತೋಲೆ

ವಿಷಯ: 2023ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ಪ್ರಕ್ರಿಯೆ ಸಂಬಂಧ ಗಣಕೀಕೃತ ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸುವ ಬಗ್ಗೆ

ಉಲ್ಲೇಖ:
1. ಈ ಕಛೇರಿ ಸಮ ಸಂಖ್ಯೆಯ ದಿನಾಂಕ:05.07.2023ರ ಅಧಿಸೂಚನೆ.
2. ಈ ಕಛೇರಿ ಸಮಸಂಖ್ಯೆಯ ಸುತ್ತೋಲೆ ದಿ:17.07.2023.
3. ಈ ಕಛೇರಿ ಸಮ ಸಂಖ್ಯೆಯ ದಿನಾಂಕ:21.07.2023 ಮತ್ತು 24.07.2023 ರಂತೆ ಪ್ರಕಟಿಸಲಾದ ತಾತ್ಕಾಲಿಕ ಆದ್ಯತಾ ಪಟ್ಟಿ.
4. ಈ ಕಛೇರಿ ಸಮ ಸಂಖ್ಯೆಯ ದಿನಾಂಕ:27.07.2023 ರಂತೆ ಪ್ರಕಟಿಸಲಾದ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ.

*****

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕರ (ಪ್ರಾಧ್ಯಾಪಕರು, ಸಹ/ಸಹಾಯಕ ಪಾಧ್ಯಾಪಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರು) ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ಅನ್ನು ರೂಪಿಸಿ ಅಧಿಸೂಚಿಸಲಾಗಿರುತ್ತದೆ.

ಉಲ್ಲೇಖ(4) ರಂತೆ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೆ ಒಳಪಡುವ ಬೋಧಕರ ವಲಯವಾರು ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸಿದ್ದು, ದಿನಾಂಕ:28.07.2023ರಿಂದ ಗಣಕೀಕೃತ ಆನ್‌ಲೈನ್ ಕೌನ್ಸಿಲಿಂಗ್ ನಡೆಸಲು ಉದ್ದೇಶಿಸಲಾಗಿದೆ. Online Transfer Counselling ಪ್ರಕ್ರಿಯೆಗೆ ಸಂಬಂಧಿಸಿದಂತೆ ಬೋಧಕರು ಈ ಕೆಳಕಂಡ ಅಂಶಗಳನ್ನು ಪರಿಗಣನೆಯಲ್ಲಿಟ್ಟುಕೊಂಡು ಕೌನ್ಸಿಲಿಂಗ್‌ನಲ್ಲಿ ಪಾಲ್ಗೊಳ್ಳುವಂತೆ ಸೂಚಿಸಲಾಗಿದೆ.

1. ಬೋಧಕರು ತಮ್ಮ ಕಾಲೇಜಿನ ಲಾಗಿನ್ ಮೂಲಕ ಅಥವಾ ವೈಯಕ್ತಿಕ ಲಾಗಿನ್ ಮೂಲಕ ಮಾತ್ರ ಕೌನ್ಸಿಲಿಂಗ್‌ನಲ್ಲಿ ಪಾಲ್ಗೊಳ್ಳುವುದು.
2. ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ವಿಷಯವಾರು ಹುದ್ದೆಗಳಲ್ಲಿ ಪ್ರಯೋಗರಹಿತ ವಿಷಯಗಳಿಗೆ ಕನಿಷ್ಟ 16 ಗಂಟೆಗಳಿಗಿಂತ ಹೆಚ್ಚು ಕಾರ್ಯಭಾರವಿರುವ ಹಾಗೂ ಪ್ರಯೋಗಸಹಿತ ವಿಷಯಗಳಲ್ಲಿ ಕನಿಷ್ಟ 20 ಗಂಟೆಗಳಿಗಿಂತ ಹೆಚ್ಚು ಕಾರ್ಯಭಾರವಿರುವ ಹುದ್ದೆಗಳನ್ನು ಮಾತ್ರ ಕೌನ್ಸಿಲಿಂಗ್‌ನಲ್ಲಿ ಪ್ರದರ್ಶಿಸಲಾಗುವುದು. ಶೈಕ್ಷಣಿಕವಾಗಿ ಅಗತ್ಯವಿರುವ ಖಾಲಿ ಹುದ್ದೆಗಳೊಂದಿಗೆ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೆ ಅರ್ಹರಾಗಿರುವ ಬೋಧಕರು ಧಾರಣೆ ಮಾಡಿರುವ ಹುದ್ದೆಗಳನ್ನು ಖಾಲಿ ಹುದ್ದೆಯೆಂದು ಪರಿಗಣಿಸಲಾಗುವುದು.
3. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವಲಯವಾರು ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಶೇ.75 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಹಾಗೂ ಶೇ.25 ರಷ್ಟು ಹುದ್ದೆಗಳನ್ನು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಿರಿಸಬೇಕಿರುತ್ತದೆ.
4. ರಾಜಧಾನಿ ಬೆಂಗಳೂರಿನಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಶೇ.8 ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಹಾಗೂ ಶೇ.92 ರಷ್ಟು ಹುದ್ದೆಗಳನ್ನು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಿರಿಸಬೇಕಿರುತ್ತದೆ.
5. ಕಲ್ಯಾಣ ಕರ್ನಾಟಕ ಮತ್ತು ಬೆಂಗಳೂರು ನಗರವನ್ನು ಹೊರತುಪಡಿಸಿ ಉಳಿದ ಪ್ರದೇಶಗಳಲ್ಲಿರುವ ಮಂಜೂರಾದ ವಿಷಯವಾರು ಹುದ್ದೆಗಳಲ್ಲಿ ಶೇ.100 ರಷ್ಟು ಹುದ್ದೆಗಳು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಾಗಿರುತ್ತದೆ.
6. ಕೌನ್ಸಿಲಿಂಗ್ ಸಂದರ್ಭದಲ್ಲಿ ವಿಷಯವಾರು ಖಾಲಿ ಹುದ್ದೆಗಳನ್ನು ಪ್ರದರ್ಶಿಸುವ ಸಮಯದಲ್ಲಿ ಈಗಾಗಲೇ ಕರ್ತವ್ಯನಿರ್ವಹಿಸುತ್ತಿರುವ ಸಂಖ್ಯೆಯಲ್ಲಿ ಕಲ್ಯಾಣ ಕರ್ನಾಟಕ ಹಾಗೂ ಉಳಿಕೆ ರಾಜ್ಯ ವೃಂದಕ್ಕೆ ಸೇರಿದ ಸಂಖ್ಯೆಯನ್ನು ಹೊರತುಪಡಿಸಿ ಉಳಿದ ಹುದ್ದೆಗಳನ್ನು ಮೇಲೆ ಕ್ರಮ ಸಂ. 3, 4 ಮತ್ತು 5 ರಲ್ಲಿ ತಿಳಿಸಿರುವ ಅನುಪಾತದಲ್ಲಿ ಪ್ರದರ್ಶಿಸಲಾಗುವುದು.
7. ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ ಹಾಗೂ ಉಳಿಕೆ ರಾಜ್ಯ ವೃಂದದಲ್ಲಿನ ಬೋಧಕರನ್ನು ಜೇಷ್ಟತೆಯನ್ವಯ ಒಟ್ಟುಗೂಡಿಸಿ ಒಂದೇ ಆದ್ಯತಾ ಪಟ್ಟಿಯನ್ನು (Combined Seniority list) ಅನ್ನು ತಯಾರಿಸಿ ಅದರಂತೆ ಕೌನ್ಸಿಲಿಂಗ್‌ನಲ್ಲಿ ಅವಕಾಶ ನೀಡಲಾಗುವುದು ಹಾಗೂ ಮೇಲೆ ಕ್ರ.ಸಂ 02 ರಿಂದ 06 ರಲ್ಲಿ ತಿಳಿಸಿರುವಂತೆ ವಿಷಯವಾರು ಖಾಲಿ ಹುದ್ದೆಗಳನ್ನು ಪ್ರದರ್ಶಿಸಲಾಗುವುದು. ಹಾಗೂ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

8. ಕೌನ್ಸಿಲಿಂಗ್ ಸಮಯದಲ್ಲಿ ಆಯ್ಕೆ ಮಾಡಿಕೊಳ್ಳಲು ಖಾಲಿ ಹುದ್ದೆ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಪ್ರಸಕ್ತ ಸಾಲಿಗೆ ಅನ್ವಯಿಸುವಂತೆ ಪ್ರಸ್ತುತ ಕರ್ತವ್ಯನಿರ್ವಹಿಸುತ್ತಿರುವ ಕಾಲೇಜಿನಲ್ಲಿಯೇ ಮುಂದುವರೆಸಲಾಗುವುದು.

9. ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿರುವ ಪತಿ-ಪತ್ನಿ ಪ್ರಕರಣದ ಬೋಧಕರನ್ನು ಹೊರತುಪಡಿಸಿ ಉಳಿದ ಬೋಧಕರು ಪ್ರಸ್ತುತ ತಾವು ಲೀನ್ ಹೊಂದಿರುವ ಕಾಲೇಜಿನ ಊರು/ಪಟ್ಟಣ/ನಗರವನ್ನು ಹೊರತುಪಡಿಸಿ ಇತರೆಡೆಗಳ Vacancy ಪಟ್ಟಿಯಲ್ಲಿನ ಕಾಲೇಜುಗಳಲ್ಲಿ ಲಭ್ಯವಾಗುವ ಖಾಲಿಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

   <u>**ಉದಾ:**</u> *ಮಮವಿಕಾ ಮೈಸೂರು ಇಲ್ಲಿನ ಬೋಧಕರು ಮೈಸೂರು ನಗರದ ಇತರ ಕಾಲೇಜುಗಳನ್ನು ಹೊರತುಪಡಿಸಿ* Vacancy ಪಟ್ಟಿಯಲ್ಲಿನ *ಇತರ ಯಾವುದೇ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.*

10. ಪತಿ-ಪತ್ನಿ ಪ್ರಕರಣದಲ್ಲಿ ಪತಿ/ಪತ್ನಿ ಕರ್ತವ್ಯನಿರ್ವಹಿಸುತ್ತಿರುವ ಜಿಲ್ಲೆಯಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು. ಒಂದು ವೇಳೆ ಪತಿ/ಪತ್ನಿ ಕರ್ತವ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಮಾತ್ರ ಸಮೀಪದ ಜಿಲ್ಲೆಯ ಖಾಲಿ ಹುದ್ದೆ ಲಭ್ಯವಿರುವ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

    ಆದರೆ ಅದೇ ಜಿಲ್ಲೆಯಲ್ಲಿ ಹುದ್ದೆ ಖಾಲಿಯಿರುವ ಸ್ಥಳವು ಪಕ್ಕದ ಜಿಲ್ಲೆಯ ಹುದ್ದೆ ಖಾಲಿಯಿರುವ ಸ್ಥಳಕ್ಕಿಂತ ಹೆಚ್ಚು ಅಂತರದಲ್ಲಿದ್ದಲ್ಲಿ ಮಾತ್ರ ಪಕ್ಕದ ಜಿಲ್ಲೆಯ ಕಡಿಮೆ ಅಂತರದಲ್ಲಿರುವ ಹುದ್ದೆ ಖಾಲಿಯಿರುವ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

11. ಪತಿ/ಪತ್ನಿ ಒಂದೇ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪತಿ-ಪತ್ನಿ ಪ್ರಕರಣದಲ್ಲಿ ವರ್ಗಾವಣೆ ಬಯಸಿದಲ್ಲಿ ಪ್ರಸ್ತುತ ಕರ್ತವ್ಯನಿರ್ವಹಿಸುತ್ತಿರುವ ಕಾರ್ಯಸ್ಥಳಕ್ಕಿಂತ ಕಡಿಮೆ ಅಂತರದ ಸ್ಥಳವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

12. ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಾಗಿರುವ ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಪಡೆದಿರುವ ಬೋಧಕರು ಸುಳ್ಳು/ತಪ್ಪಾದ ದಾಖಲೆಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಅಂತಹ ಬೋಧಕರ

ವರ್ಗಾವಣೆಯನ್ನು ಅನರ್ಹಗೊಳಿಸಿ ಅಂತಹವರ ವಿರುದ್ಧ ನಿಯಮಾನುಸಾರ ಇಲಾಖಾ ಶಿಸ್ತು ಕ್ರಮ ಜರುಗಿಸಲಾಗುವುದು.

13. ವಿಶೇಷ ಪ್ರಕರಣಗಳಡಿ ವರ್ಗಾವಣೆಗೆ ಅರ್ಹರಾಗಿರುವ ಬೋಧಕರು ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಪಡೆದಿರುವ ಬೋಧಕರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ಸಂಬಂಧಪಟ್ಟ ಪ್ರಾಂಶುಪಾಲರಿಗೆ ಕಡ್ಡಾಯವಾಗಿ ಸಲ್ಲಿಸುವುದು.
14. ವರ್ಗಾವಣೆ ನಿಯಮಗಳನ್ವಯ ಬಿ-ವಲಯ(B-Zone)ದಿಂದ ಕೌನ್ಸಿಲಿಂಗ್ ಅನ್ನು ಪ್ರಾರಂಭಿಸಲಾಗುವುದು.
15. ವರ್ಗಾವಣೆ ಆದ್ಯತಾ ಪಟ್ಟಿಯಲ್ಲಿನ ಬೋಧಕರುಗಳೊಂದಿಗೆ Online Counselling ಸಂಬಂಧದ Video Conference Link ಅನ್ನು Share ಮಾಡಲಾಗುವುದು ಹಾಗೂ ಇಲಾಖೆಯ Website ನಲ್ಲಿಯೂ ಸಹ ಪ್ರಕಟಿಸಲಾಗುವುದು.
16. ಈ ಅಧಿಸೂಚನೆಗೆ ಲಗತ್ತಿಸಿರುವ ಅಂತಿಮ ಆದ್ಯತಾ ಪಟ್ಟಿಯ ಜೇಷ್ಠತೆಯನ್ವಯ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು ಸಂಬಂಧಿಸಿದ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು.
17. ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗೆ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೆ ಆದ್ಯತಾಪಟ್ಟಿಯಲ್ಲಿನ ಬೋಧಕರು ವರ್ಗಾವಣಾ ವೇಳಾಪಟ್ಟಿಯಂತೆ Video Conference ಮೂಲಕ ಭಾಗವಹಿಸುವುದು.
18. ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಗೆ ಒಳಪಡುವ ಬೋಧಕರು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿದ್ದು, ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿ ಪರಿಗಣಿಸಲಾಗುವುದು.
19. ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿನ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು. ಬೋಧಕರು ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಸಾರ್ವಜನಿಕ

ಹಿತಾಸಕ್ತಿಯ ವರ್ಗಾವಣೆಯ ಕೌನ್ಸಿಲಿಂಗ್ ಪ್ರಕ್ರಿಯೆಯ ನಂತರ ಲಭ್ಯವಿರುವ ಖಾಲಿ ಹುದ್ದೆಗೆ ಇಲಾಖೆಯಿಂದ ವರ್ಗಾವಣೆ ಮಾಡಲಾಗುವುದು.

20. ವಿಶೇಷ ಪ್ರಕರಣಗಳಡಿ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿ ಆಧ್ಯತಾ ಪಟ್ಟಿಯಲ್ಲಿರುವ ಬೋಧಕರಿಗೆ ಎರಡು ರೌಂಡ್‌ಗಳ ಕೌನ್ಸಿಲಿಂಗ್ ಅವಕಾಶ ಕಲ್ಪಿಸಲಾಗುವುದು. ಮೊದಲನೇ ರೌಂಡ್‌ನಲ್ಲಿ ಕೌನ್ಸಿಲಿಂಗ್‌ಗೆ ಗೈರುಹಾಜರಾದವರನ್ನು ಎರಡನೇ ರೌಂಡ್ ಕೌನ್ಸಿಲಿಂಗ್‌ಗೆ ಪರಿಗಣಿಸುವುದಿಲ್ಲ.
21. ಮೊದಲನೆಯ ರೌಂಡ್ ಕೌನ್ಸಿಲಿಂಗ್‌ಗೆ ಗೈರುಹಾಜರಾದ ವಿಶೇಷ ಪ್ರಕರಣಗಳ ಬೋಧಕರಿಗೆ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಟ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.
22. ಮೊದಲನೆಯ ರೌಂಡ್‌ನಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳದ ವಿಶೇಷ ಪ್ರಕರಣಗಳ ಬೋಧಕರಿಗೆ ಎರಡನೇ ರೌಂಡ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು.
23. ಎರಡನೇ ರೌಂಡ್‌ನಲ್ಲಿಯೂ ಸ್ಥಳ ಆಯ್ಕೆ ಮಾಡಿಕೊಳ್ಳದ ಬೋಧಕರಿಗೆ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಟ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.
24. ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಮಹಾರಾಣಿ ವಿಜ್ಞಾನ ಕಾಲೇಜು, ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಮತ್ತು ಶ್ರೀಮತಿ ವಿಹೆಚ್‌ಡಿ ಗೃಹವಿಜ್ಞಾನ ಕಾಲೇಜು, ನೃಪತುಂಗ ವಿಶ್ವವಿದ್ಯಾಲಯದ ವ್ಯಾಪ್ತಿಯ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜು ಮತ್ತು ಏಕೀಕೃತ ವಿಶ್ವವಿದ್ಯಾಲಯ ವ್ಯಾಪ್ತಿಯ ಸರ್ಕಾರಿ ಕಾಲೇಜು ಮಂಡ್ಯ ಇಲ್ಲಿನ ಖಾಲಿ ಹುದ್ದೆಗಳನ್ನು ಮತ್ತು ಕಡ್ಡಾಯ ವರ್ಗಾವಣೆಯಿಂದ ಉದ್ಭವವಾಗುವ ಹುದ್ದೆಗಳನ್ನು ಕೌನ್ಸಿಲಿಂಗ್‌ನಲ್ಲಿ ಪರಿಗಣಿಸಲಾಗುವುದಿಲ್ಲ.
25. ಕೌನ್ಸಿಲಿಂಗ್ ಪ್ರಕ್ರಿಯೆಯನ್ನು WEBEX Platform ಬಳಸಿ ಆನ್‌ಲೈನ್ ಮೂಲಕ ನಡೆಸಲಾಗುವುದು. ವರ್ಗಾವಣೆ ಆದ್ಯತಾ ಪಟ್ಟಿಯಲ್ಲಿರುವ ಬೋಧಕರು WEBEX APP ಅನ್ನು Google Play store ಮೂಲಕ download ಮಾಡಿಕೊಂಡು Install ಮಾಡಿಕೊಂಡಿರಬೇಕು.

26. ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವ ಸಮಯದಲ್ಲಿ ಉತ್ತಮ Internet Connectivity ಲಭ್ಯವಿರುವುದನ್ನು ಖಚಿತಪಡಿಸಿಕೊಂಡು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವುದು ಸಂಬಂಧಿಸಿದ ಬೋಧಕರ ಜವಾಬ್ದಾರಿಯಾಗಿರುತ್ತದೆ. ಯಾವುದೇ ಕಾರಣದಿಂದ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ವಿಫಲರಾದಲ್ಲಿ, ಗೈರುಹಾಜರಿಯೆಂದು ಪರಿಗಣಿಸಲಾಗುವುದು.
27. ನಿಗದಿ ಪಡಿಸಿದ Time Schedule ನಲ್ಲಿಯೇ ನಿಗದಿಪಡಿಸಿದ ಬೋಧಕರು ಮಾತ್ರವೇ Login ಆಗಿ Audio & Video Mute ಮಾಡಿಕೊಂಡಿರುವುದು. ಅವಶ್ಯವಿದ್ದಾಗ ಮಾತ್ರ Audio & Video on ಮಾಡಿಕೊಂಡು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸತಕ್ಕದ್ದು ಹಾಗೂ ಸ್ಥಳ ಆಯ್ಕೆ ಮಾಡಿಕೊಂಡ ಕೂಡಲೇ Logout ಆಗುವುದು.
28. ಕೌನ್ಸಿಲಿಂಗ್ ಸಮಯದಲ್ಲಿ Login ಆದ ನಂತರ ಸ್ಥಳ ಆಯ್ಕೆ ವಿಷಯವನ್ನು ಹೊರತುಪಡಿಸಿ ಇತರೆ ವಿಷಯಗಳ ಕುರಿತು ಚರ್ಚೆಗೆ ಅವಕಾಶವಿರುವುದಿಲ್ಲ. ಈ ವಿಷಯದ ಉಲ್ಲಂಘನೆಯನ್ನು ದುರ್ನಡತೆಯೆಂದು ಪರಿಗಣಿಸಲಾಗುವುದು.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ**

**ಇವರಿಗೆ**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಬೋಧಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪ್ರತಿಯನ್ನು - ಮಾಹಿತಿಗಾಗಿ**

1. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು
2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ಕೊಠಡಿ ಸಂ:344 ವಿಕಾಸಸೌಧ, ಬೆಂಗಳೂರು
3. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ ಬೆಂಗಳೂರು, ಮೈಸೂರು, ಶಿವಮೊಗ್ಗ , ಮಂಗಳೂರು, ಧಾರವಾಡ ಹಾಗೂ ಕಲಬುರಗಿ- ಮಾಹಿತಿಗಾಗಿ.
4. ರಕ್ಷಾ ಕಡತ
5. ಕಛೇರಿ ಪ್ರತಿ.